ದಡ್ಡಿ ಹೌದಾಗಿದ್ದರೆ ಇವಳು ಹೇಳಿದ್ದು ಕೇಳಿ 'ಹೀಗನ್ನು' ಎಂದು ಹೇಳಿ ಕಳಿಸಿರುತ್ತಾಳೆ ಚಿಕ್ಕಮ್ಮ. ಮಲತಾಯಿ ಅನ್ನುವವಳು ಇವಳನ್ನು ದುಡಿಸಿಕೊಂಡು ತಿನ್ನುತ್ತಾಳೆ ಅಂದುಕೊಂಡಿದ್ದು ನನ್ನ ತಪ್ಪು ತಿಳಿವಳಿಕೆಯೇ? ಹೀಗೂ ಇರುತ್ತಾರಾ ಜನ, ಕಲ್ಪನೆಗೆ ನಿಲುಕದಂತೆ?

ಯಾವತ್ತೂ ಕೆಲಸಕ್ಕೆ ತಪ್ಪಿಸಿಕೊಳ್ಳದಿದ್ದ ಚಂದ್ರಿ ಆಮೇಲಿಂದ ಕೆಲಸಕ್ಕೆ ಚಕ್ಕರ್ ಹಾಕುವುದು ಮಾಮೂಲಿನ ಸಂಗತಿ ಎಂಬಂತಾಯ್ತು. 'ನಾಳೆ ಮಾತುಕತೆಗೆ ಬರ್ತಾರಂತೆ', 'ನಾಳೆ ಮೊಬೈಲು ತಂದುಕೊಡ್ತಾನಂತೆ', 'ನಾಳೆ ನಂಜನಗೂಡಿನ ದೇವಸ್ಥಾನಕ್ಕೆ ಹೋಗ್ಬೇಕಂತೆ', 'ನಾಳೆ ಹೂ ಮುಡಿಸೋ ಶಾಸ್ತ್ರ'... ಕೆಲಸಕ್ಕೆ ಬರುವ ದಿನಗಳಿಗಿಂತಾ ಬಾರದ ದಿನಗಳೇ ಹೆಚ್ಚುಹೆಚ್ಚಾಗತೊಡಗಿ, 'ಬರ್ಬೇಡ ಕಣೇ, ಬಿಟ್ಬಿಡು ಕೆಲಸ. ಬೇರೆ ಯಾರನ್ನಾದ್ರೂ ನೋಡ್ಕೋತೀನಿ...' ಅಂದರೆ ಅದಕ್ಕೂ ರೆಡಿ ಇಲ್ಲ.

'ಹೋಗು ಅಂದಿದಾಳೆ ಚಿಕ್ಕಮ್ಮ' ಎನ್ನುವ ಆಣಿಮುತ್ತು. 'ಮದುವೆ ಯಾವತ್ತು?' ಅನ್ನುವ ನಿಖರ ದಿನಾಂಕ ಅವಳಿಗೆ ಗೊತ್ತಿಲ್ಲ. ಒಮ್ಮೆ ಇಪ್ಪತ್ತು ಅನ್ನುತ್ತಾಳೆ. ಮತ್ತೊಮ್ಮೆ ಮತ್ತೊಂದು. ಯಾವ ತಿಂಗಳು ಅಂದರೆ ವಿಪರೀತದ ಗಲಿಬಿಲಿ. ಗೊತ್ತೇ ಇಲ್ಲ. 'ಹೋಗಲಿ ಬಿಡು. ಬಂದಷ್ಟು ದಿನ ಬರಲಿ' ಎಂದು ನಾನೇ ಹೊಂದಾಣಿಕೆ ಮಾಡಿಕೊಂಡು, ಕೊನೆಗೂ ಚಂದ್ರಿಯ ಬಾಯಿಂದ ಆ ಮಾತು ಬಂದಿತ್ತು,

'ನಾಳೆಯಿಂದ ನಾನು ಕೆಲಸಕ್ಕೆ ಬರಲ್ಲ'.

***

ಮೊಬೈಲ್ ಕೊಡಿಸಿದ್ದಾನೆ ಭಾವಿ ಗಂಡ. ಉಪಯೋಗಿಸಲು ಇವಳಿಗೆ ಗೊತ್ತಿಲ್ಲ. ಅವಳ ಬುದ್ಧಿಮಟ್ಟವನ್ನು ವರ್ಷಾನುಗಟ್ಟಲೆಯಿಂದ ಕಂಡುಕೊಂಡಿದ್ದ ನನಗೆ ಅವಳು ಅದನ್ನು ಕಲಿಯುತ್ತಾಳೆಂಬ ನಂಬಿಕೆಯೂ ಇಲ್ಲ. ಇವಳೊಂದು ಮೊದ್ದು ಎಂದು ಗೊತ್ತಾದರೆ ಮೊದಲೇ ಮದುವೆ ಮುರಿದು ಬೀಳಬಹುದು. ಅಥವಾ ವರದಕ್ಷಿಣೆಯ ವ್ಯಾಮೋಹಕ್ಕೆ ಮದುವೆಯಾದರೂ ಆ ಗಂಡ ಅನ್ನಿಸಿಕೊಂಡವನು ಇವಳನ್ನು ಹೇಗೆ ನಡೆಸಿಕೊಳ್ಳುತ್ತಾನೋ ಅಥವಾ ಬಿಟ್ಟೇ ಬಿಡುತ್ತಾನೋ ಅಥವಾ ಕಸಕ್ಕಿಂತಾ ಕಡೆಯಾಗಿ ಕಂಡು ಹಿಂಸೆಸುತ್ತಾನೋ, ಯಾಕೋ ಈ ಮದುವೆ ಬರ್ಕತ್ತಾಗುವುದಿಲ್ಲ, ಯಾವುದೋ ದುರವಸ್ಥೆ ಖಂಡಿತಾ ಅನ್ನುತ್ತಿದೆ ಮನಸ್ಸು. ಅವಳ ಮಾತಿನ ಪ್ರಕಾರ ಮನೆ ಕಟ್ಟುವ ಕಾಂಟ್ರ್ಯಾಕ್ಟ್ ವಹಿಸಿಕೊಂಡು ಪೂರೈಸಿಕೊಡುವ ಉದ್ಯೋಗ ಅವಳ ಗಂಡನಿಗೆ. 'ಮದುವೆಯಾದ ಮೇಲೆ ಬೇರೆಯೋರ ಮನೆಗೆ ನೀನು ಕೆಲಸಕ್ಕೆ ಹೋಗ್ಬೇಡ' ಅಂದಿದ್ದಾನಂತೆ. ಈ ಮಾತನ್ನೇನೂ ಹೆಮ್ಮೆಯಿಂದ ಹೇಳಿಕೊಂಡಿರಲಿಲ್ಲ ಚಂದ್ರಿ. 'ಮನೇಲಿ ಖಾಲಿ ಕೂರೋಕೆ ನಂಗೆ ಬೇಜಾರು...' ಅಂದಿದ್ದಳು.

'ಹುಚ್ಚಿ ಎಲ್ಲೋ' ಅಂದಿದ್ದೆ.

ಇವಳ ಹಣೆಬರಹ ಯಾರಿಗೆ ಗೊತ್ತಿದೆ? ಮದುವೆ ಅಂದರೇನೇ ಅದೃಷ್ಟದ ಕಣ್ಣಾಮುಚ್ಚಾಲೆ. ಹಾವು ಏಣಿಯಾಟ. ಹುಡುಗಿಯ ಅಂದ ಚಂದ,



ಬುದ್ಧಿವಂತಿಕೆ, ಸ್ಥಿತಿವಂತಿಕೆ ಎಲ್ಲವನ್ನೂ ಮೀರಿದ ಯಾವುದೋ ವಿಧಿ ಬದುಕಿನ ಲೆಕ್ಕಾಚಾರ ಮಾಡುತ್ತದೆ. ಹಾಗೂ ಅನಿಸಿ, ಹೀಗೂ ಅನಿಸುತ್ತಾ 'ಅಪಶಕುನದ ಯೋಚನೆ ಬೇಡ. ತಾಯಿಲ್ಲದ ಹುಡುಗಿ ಇನ್ನಾದರೂ ಸುಖವಾಗಿರಲಿ' ಎಂದು ಮನಸಾ ಹಾರೈಸಿದ್ದೆ.

ಮದುವೆ ಪತ್ರಿಕೆಯೂ ನನ್ನ ಕೈಗೆ ಬಂತು. ಪಕ್ಷವೊಂದರ ಪ್ರಭಾವಿ ರಾಜಕಾರಣಿಯ ಕೃಪಾಶೀರ್ವಾದಗಳೊಂದಿಗೆ ಎನ್ನುವ ಒಕ್ಕಣೆಯೊಂದಿಗೆ ಆರಂಭವಾದ ಲಗ್ನಪತ್ರಿಕೆ. 'ಒಂದಿನ ಗಂಡನ್ನ ಕರ್ಕೊಂಬಾ...' ಅಂದಿದ್ದೆ ಲೋಕಾರೂಢಿಯಾಗಿ. ತಲೆ ಕುಣಿಸಿದ್ದಳು ಚಂದ್ರಿ. ನನ್ನ ಮಾತಿಗೆ ಅವಳು ಬೆಲೆ ಕೊಡುತ್ತಾಳೆಂದು, ನೆನಪಿನಲ್ಲಿ ಇಟ್ಟುಕೊಂಡಿರುತ್ತಾಳೆಂದು ನಾನು ಕಲ್ಪನೆ ಕೂಡಾ ಮಾಡಿರಲಿಲ್ಲ. ಮದುವೆಯಾಗಿ ಹದಿನೈದಿಪ್ಪತ್ತು ದಿನಗಳ ನಂತರ ಗಂಡನೊಡನೆ ಅವನ ಸ್ಕೂಟರಿನ ಹಿಂಬದಿ ಕೂತು ಮನೆಯೆದುರು ಬಂದಿಳಿದವಳನ್ನು ಕಂಡು ದಂಗುಬಡಿದಿದ್ದೆ. ಇವನು ಚಂದ್ರಿಯ ಗಂಡನಾ ಅಥವಾ ಅಪ್ಪ? ನನ್ನ ಸಂಶಯವನ್ನು ನಿವಾರಿಸಿದ್ದಳು ಚಂದ್ರಿ, 'ನನ್ನ ಗಂಡ' ಎನ್ನುವ ಹೇಳಿಕೆಯೊಂದಿಗೆ.

***

ಹೊಸದಾಗಿ ಬಂದ ಮನೆಗೆಲಸದಾಕೆ ಚಂದ್ರಿಯ ಕುರಿತು ಮತ್ತಿಷ್ಟು ಮಾಹಿತಿ ಒದಗಿಸಿದ್ದಳು. ಅವಳ ಗಂಡನಿಗೆ ಇದು ಎರಡನೇ ಮದುವೆ. ಮೊದಲ ಮದುವೆಯಲ್ಲಿ ಇಬ್ಬರು ಮಕ್ಕಳಿದ್ದಾರೆ. ಮೊದಲನೆಯವಳು ಹೈಸ್ಕೂಲಿನಲ್ಲಿ, ಎರಡನೆಯವನು ಇನ್ನೆರಡು ಕ್ಲಾಸು ಹಿಂದೆ. 'ಆ ಪೆದ್ದಿಗೆ ಅಷ್ಟು ಸಿಕ್ಕಿದ್ದೇ ಹೆಚ್ಚು. ಇನ್ನೆಂತೋನು ಸಿಕ್ತಾನೆ ಅವಳಿಗೆ?' ತೀರ್ಪು ನೀಡಿದ್ದಳು ಕೇಳದೆಯೇ.

ಸಿಟ್ಟು ಬಂದಿತ್ತು ಚಂದ್ರಿಯ ಮೇಲೆ. ಅಷ್ಟೂ ಗೊತ್ತಾಗುವುದಿಲ್ಲವಾ ಇವಳಿಗೆ? 'ಬೇಡ' ಎಂದು ಹಟ ಮಾಡಲು ಯಾವ ರೋಗ ಬಡಿದಿತ್ತು? ಮದುವೆಯಾಗುವವರೆಗೆ ಅವಳನ್ನು ಅಜ್ಞಾನದಲ್ಲಿಟ್ಟಿದ್ದರಾ ಅಥವಾ ಯಾರೆದುರೂ ಉಸಿರೊಡೆಯಬೇಡ ಎಂದು ತಾಕೀತು ಮಾಡಿದ್ದಳಾ ಚಿಕ್ಕಮ್ಮ? ಹಾಳು ಬೀಳಲಿ, ಅವನಿಗೆ ವಯಸ್ಸಾಗಿದ್ದೂ ಈ ಪೆದ್ದಿಯ ಕಣ್ಣಿಗೆ ಕಾಣಲಿಲ್ಲವೇ? ಅಷ್ಟೂ ದಡ್ಡತನವೇ? ಅಷ್ಟಕ್ಕೂ ಇವಳ ನಿಜವಾದ ವಯಸ್ಸು ಎಷ್ಟೋ ಯಾರಿಗೆ ಗೊತ್ತು? ಆದರೂ ಅವನು ಇವಳಿಗಿಂತಾ ಸಾಕಷ್ಟು ದೊಡ್ಡವನು ಅನ್ನುವುದು ಮೇಲ್ನೋಟಕ್ಕೆ ಎದ್ದು ಕಾಣುವ ಸತ್ಯ. ಹೋಗಲಿ ಅಂದರೆ ಬೆಳೆದ ಎರಡೆರಡು ಮಕ್ಕಳ ತಂದೆ. 'ಹುಡುಗ..., ಹುಡುಗ...' ಎಂದೇ ಅವನ ಕುರಿತು ಮಾತಾಡುತ್ತಿದ್ದ ಇವಳು ಅದಿನ್ನೆಂತಾ ಬುದ್ಧಿಮಟ್ಟದವಳು? ಚಕ್ಕನೆ ತಲೆಯೊಳಗೆ ಮತ್ತೊಂದೇನೋ ಹುಳು ಹೊಕ್ಕುಬಿಟ್ಟಿತು.

'ಎರಡು ಲಕ್ಷ..., ಎರಡು ಲಕ್ಷ...' ಎಂದು ಇವಳು ಹೇಳಿದ್ದು ಇವರು ಕೊಟ್ಟಿದ್ದೋ ಅಥವಾ ಆ ಗಂಡ ಅನ್ನಿಸಿಕೊಂಡವನು ಈ ಹುಡುಗಿಯನ್ನು ಕೊಂಡುಕೊಳ್ಳಲು ಕೊಟ್ಟಿದ್ದೋ? ಮಾತುಕತೆಯಲ್ಲಿ ನುಸುಳಿದ ಎರಡು ಲಕ್ಷದ ವ್ಯವಹಾರ ಇವಳಿಗೆ ಅದೆಷ್ಟು ಅರ್ಥವಾಗಿತ್ತೋ? 'ಗದ್ದೆ ಅಡ ಇಡುವ' ಮಾತು ಚಿಕ್ಕಮ್ಮನ ಬುದ್ಧಿವಂತಿಕೆಯಾಗಿರಬಹುದು. ಅವಳ ಮಾತೆಂದರೆ ವೇದವಾಕ್ಯ ಎಂದು ನಂಬಿಕೊಂಡಿದ್ದವಳಿಗೆ ದೊಡ್ಡ ಮೋಸ? ಮಗಳನ್ನು ಮಾರಿಕೊಂಡನೇ ಕುಡುಕ ಅಪ್ಪ? ಛೇ... ಛೇ...

***

ಕಥೆಯಲ್ಲಿ ಚೂರು ಕೊಸರು ಉಳಿದುಕೊಂಡಿದೆ. ಚಂದ್ರಿ ಮದುವೆ ಮಾಡಿಕೊಂಡು ಹೋಗಿ ವರ್ಷಗಳೇ ಕಳೆದು, ನನ್ನ ಮನಸ್ಸಿನಿಂದ ಅವಳ ಬಿಂಬ ಮಾಸಿ ಹೋಗಿ, ಅದೊಂದು ದಿನ ಮಧ್ಯಾಹ್ನ ಮನೆಯ ಕಾಲಿಂಗ್ ಬೆಲ್ ಒತ್ತಿದಳು ಚಂದ್ರಿ. ನೋಡಿದ ನನಗೆ ಅವಳ ಗುರುತು ಸಿಗದಷ್ಟು ಅವಳಲ್ಲಿ ಬದಲಾವಣೆ. ಅಚ್ಚುಕಟ್ಟಾಗಿ ಸೀರೆ ಉಟ್ಟಿದ್ದಾಳೆ. ಬುರುಡುಬುರುಡಾಗಿ ಮೈ ತುಂಬಿಕೊಂಡಿದ್ದಾಳೆ. ಕುತ್ತಿಗೆಯಲ್ಲಿ ಚಿನ್ನದ ತಾಳಿಸರ. ಕಾಲಿಗೆ ಕಿರುಗೆಜ್ಜೆಗಳ ಬೆಳ್ಳಿ ಚೈನು. ಮುಖದಲ್ಲಿ ಮಂದಹಾಸ.

'ನೀನು ಚಂದ್ರೀನಾ?' ಅಂದೆ ತಮಾಷಿಯಾಗಿ.

'ಹೋಗಿ ಆಂಟಿ' ಮುರುಕ ತೋರಿದವಳು ನನ್ನೊಡನೆ ಸಲೀಸಾಗಿ ಹರಟೆ ಹೊಡೆದಳು. ತಿಂಡಿ ತಿಂದು, ಕಾಫಿ ಕುಡಿದು, ಹೊರಡುವ ಹೊತ್ತಲ್ಲಿ 'ನನ್ನ ಮೊಬೈಲ್ ನಂಬರ್ ಕೊಡ್ತೀನಿ ಆಂಟಿ' ಎಂದು ಅವಳು ಅಂದಾಗ ನನ್ನ ತೋರುಬೆರಳು ಮೂಗಿನ ಮೇಲೆ.

'ನೋಡೋಣ' ಎನ್ನುವ ಕುತೂಹಲದೊಂದಿಗೆ ಪುಸ್ತಕ, ಪೆನ್ನು ಕೈಗೆ ಕೊಟ್ಟರೆ ಗುಂಡನೆಯ ಅಕ್ಷರದಲ್ಲಿ ಚಂದ್ರಾವತಿ ಎಂದು ಬರೆದು ಗೀಟು ಹಾಕಿ ಎದುರಿಗೆ ಮೊಬೈಲ್ ನಂಬರ್ ನಮೂದಿಸಿದಳು.

'ಸ್ಕೂಲಿಗೆ ಹೋಗ್ತಿದ್ದೇನೇ? ಇದೇನು ಪವಾಡ?'

'ಮಗಳು ಕಲಿಸ್ತಿದಾಳೆ...' ಅಂದಳು ಚಂದ್ರಿ ಸುಮ್ಮಾನದಿಂದ. ಹೊರಡುವ ಹೊತ್ತಲ್ಲಿ ಗಂಡನಿಗೊಂದು ಸರ್ಟಿಫಿಕೇಟು, 'ಇವನು ಕುಡಿಯೋದಿಲ್ಲ ಆಂಟಿ, ಒಳ್ಳೆಯೋನು...'

ಕೆಟ್ಟಿದ್ದೆಂದುಕೊಂಡಿದ್ದರ ಮುಸುಕಿನಲ್ಲಿ ಒಳಿತು, ಒಳಿತು ಎಂದುಕೊಂಡಿದ್ದರ ಮುಸುಕಿನಲ್ಲಿ ಕೆಡುಕು ಅಡಗಿರಬಹುದೆಂಬ ಹೇಳಿಕೆ ಮಾತಿನಲ್ಲಡಗಿದ ಸತ್ಯದ ಸಾಕ್ಷಾತ್ಕಾರವಾಯ್ತು ನನಗೆ.

ಪ್ರತಿಕ್ರಿಯಿಸಿ: feedback@sudha.co.in